ಮೂಲ ದಾವಾ ನಂಃ 22/2015

ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ **07-06-2023** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎಸ್.ಬಿ 1 ರಿಂದ 6 ನೇ ಪ್ರತಿವಾದಿ ಪರ ವಕೀಲರಿಂದಃ**

ನಮ್ಮ ಕುಟುಂಬದ ಮೂಲ ಪುರುಷ ರಾಮ ಈಶ್ವರ ಹೆಗಡೆ , ಮತ್ತು ನಮ್ಮ ಅಜ್ಜಿಯ ಹೆಸರು ಗಣಪಿ ಎಂದರೆ ಹೌದು. ರಾಮ ಈಶ್ವರ ಹೆಗಡೆ ಇವರಿಗೆ ಸುಬ್ರಾಯ, ಗಣಪತಿ , ಮತ್ತು ವೆಂಕಟ್ರಮಣ ಮೂರು ಜನ ಗಂಡು ಮಕ್ಕಳು ಎಂದರೆ ಸರಿ . ಅದರಂತೆ ಹೊನ್ನಿ , ಗಂಗೆ , ರಾಧಾ , ಶ್ರೀದೇವಿ , ಪರಮೇಶ್ವರಿ, ರವರು ಹೆಣ್ಣು ಮಕ್ಕಳು ಎಂದರೆ ಸರಿ. ಗಣಪತಿ ಇವರು ಮೃತರಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಯರಾದ ಪ್ರಭಾವತಿ , ಉಷಾ ಹಾಗೂ ಸಂತೋಷ ಇವರು ಗಣಪತಿಯವರ ಕುಟುಂಬದವರಾಗಿದ್ದಾರೆ. ನನ್ನ ತಂದೆಯು ಕೃಷಿಕರಾಗಿದ್ದಾರೆ. ಕೃಷಿಯನ್ನು ಹೊರತುಪಡಿಸಿ ಬೇರೆ ಯಾವುದೇ ಉದ್ಯೋಗವನ್ನು ಮಾಡಿಲ್ಲ. ನನ್ನ ತಾಯಿ ಗೃಹಿಣಿ. ನಮ್ಮ ಕುಟುಂಬಕ್ಕೆ ಭಾಗಾಯಿತು 38 ಗುಂಟೆ ಸ್ಥಳವಿದ್ದು ಅದರಲ್ಲಿ ಅಡಿಕೆ , ತೆಂಗು ಎಲ್ಲವೂ ಇದೆ. ನಮ್ಮ ತಂದೆಯವರು ಜೀವನೋಪಾಯಕ್ಕಾಗಿ ಸದ್ರಿ ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ ಎಂದರೆ ಸರಿ.

ನಾನು 2004 ರಿಂದ ಶಿಕ್ಷಕನಾಗಿ ಯಾದಗಿರಿ, ಹಳಿಯಾಳ , ಈಗ ಯಲ್ಲಾಪುರದಲ್ಲಿ ಕೆಲಸವನ್ನು ಮಾಡುತ್ತಿದ್ದೇನೆ. ನಾವು ಕೆಲಸ ಮಾಡಿದ ಸ್ಥಳದಲ್ಲಿಯೇ ವಾಸ್ತವ್ಯ ಮಾಡಿಕೊಂಡು ಇದ್ದೇವೆ ಎಂದರೆ ಸರಿ . ನಾವು ಹಬ್ಬ ಹಾಗೂ ಇನ್ನಿತರ ದಿನಗಳಲ್ಲಿ ನಮ್ಮ ತಂದೆಯ ಮನೆಗೆ ಹೋಗಿ ಬಂದು ಮಾಡುತ್ತೇವೆ. ದಾವಾ ಸ್ಥಳದ ವ್ಯವಹಾರವನ್ನು ಅವಿಭಕ್ತ ಕುಟುಂಬದ ಮ್ಯಾನೇಜರ್ ಆಗಿದ್ದರಿಂದ ವೆಂಕಟ್ರಮಣ ಅವರು ನೋಡಿಕೊಂಡು ಬಂದಿದ್ದರು. ನನ್ನ ತಂದೆಯು ಹಿರಿಯ ಮಗ ಆಗಿದ್ದರಿಂದ ಅವರು ಅವಿಭಕ್ತ ಕುಟುಂಬದ ಮ್ಯಾನೇಜರ್ ಆಗಿರಬೇಕೆಂದು ಕೇಳಿದಾಗ ಸಾಕ್ಷಿಯು ನನ್ನ ತಂದೆಯು ಬುದ್ಧಿ ಮಾಂಧ್ಯರಾಗಿದ್ದಾರೆ ಎಂದು ನುಡಿದಿದ್ದಾರೆ . ನನ್ನ ತಂದೆ ಬುದ್ಧಿ ಮಾಂಧ್ಯರಾಗಿದ್ದಾರೆ ಎಂಬುದಕ್ಕೆ ವೈದ್ಯಕೀಯ ಚಿಕಿತ್ಸೆಯನ್ನು ಪಡೆದಿದ್ದೇವೆ ಅವುಗಳ ದಾಖಲೆಯನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ. ವೆಂಕಟ್ರಮಣ ಅವರು ಅವಿಭಕ್ತ ಕುಟುಂಬದ ಮ್ಯಾನೇಜರ್ ಆಗಿದ್ದಾರೆ ಎಂದು ಹೇಳಲು ನಮ್ಮ ಹತ್ತಿರ ಆರ್.ಟಿ.ಸಿ ದಾಖಲೆ ಇದೆ ಅವರು ಸುಮಾರು 20 ವರ್ಷದಿಂದ ಅವಿಭಕ್ತ ಕುಟುಂಬದ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ವೆಂಕಟ್ರಮಣ ಅವರು ಅವಿಭಕ್ತ ಕುಟುಂಬದ ಮ್ಯಾನೇಜರ್ ಆಗಿದ್ದಾರೆ ಎಂದು ಮತ್ತು ನನ್ನ ತಂದೆ ಬುದ್ಧಿಮಾಂಧ್ಯರೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳದಲ್ಲಿ ವೆಂಕಟ್ರಮಣ ಅವರೇ ಸಾಗುವಳಿ ಮಾಡುತ್ತಾ ಅದರ ಉತ್ಪನ್ನವನ್ನು ತಾವೇ ಪಡೆದುಕೊಂಡಿದ್ದಾರೆ. ನಮ್ಮ ಅವಿಭಕ್ತ ಕುಟುಂಬಕ್ಕೆ ವಾರ್ಷಿಕವಾಗಿ 4,00,000/- ಲಕ್ಷದಷ್ಟು ಆದಾಯವಿದ್ದು , ಖರ್ಚು 3,00,000/- ದಷ್ಟು ಇರುತ್ತದೆ. ನಾನು ನಮ್ಮ ತಂದೆಯ ಚಿಕಿತ್ಸೆಗಾಗಿ ಹಣವನ್ನು ನಗದು ರೂಪದಲ್ಲಿ ಕೊಡುತ್ತಾ ಇದ್ದೆನು ಅದಕ್ಕೆ ಯಾವುದೇ ದಾಖಲೆ ಇಲ್ಲ. ಈ ದಾವೆಯನ್ನು ಹೂಡುವುದಕ್ಕೆ ನನ್ನ ತಾಯಿಯವರು ಮಾಹಿತಿಯನ್ನು ನೀಡಿದ್ದಾರೆ. ನಾನು ನಮ್ಮ ತಂದೆ ತಾಯಿಗೆ ಚಿಕಿತ್ಸೆಗಾಗಿ ಹಣವನ್ನು ನೀಡಿದ್ದರ ಬಗ್ಗೆ ಈ ದಾವೆಯಲ್ಲಿ ಅವರು ಮಾಹಿತಿಯನ್ನು ನೀಡಿರುವುದಿಲ್ಲ. ನಾನು ನಮ್ಮ ತಂದೆ ತಾಯಿಗೆ ಚಿಕಿತ್ಸೆಗಾಗಿ ಹಣವನ್ನು ನೀಡಿದ್ದಾಗಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳದ ಉತ್ಪನ್ನವನ್ನು ನನ್ನ ತಂದೆಯವರು ಬಳಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಈ ದಾವಾ ಸ್ಥಳದ ಹೊರತಾಗಿ ಹಡಿನಬಾಳ ಗ್ರಾಮದ ಸರ್ವೆ ನಂ. 139 ಹಿಸ್ಸಾ 1 ರಲ್ಲಿ 14 ಗುಂಟೆ ಸ್ವತ್ತಿನಲ್ಲಿ 13 ಗುಂಟೆ ನಮ್ಮ ಕುಟುಂಬಕ್ಕೆ ಸಂಬಂಧಿಸಿದೆ ಎಂದರೆ ಸರಿ. ಸದ್ರಿ ಸರ್ವೆ ನಂಬರನಲ್ಲಿ 1 ಗುಂಟೆ ಜಾಗವು ಕರ್ನಾಟಕ ಸರ್ಕಾರದ

ಹೆಸರಿನಲ್ಲಿದೆ. ಸದ್ರಿ 1 ಗುಂಟೆ ಜಾಗವು ನಮ್ಮ ಸ್ಥಳದ ಯಾವ ದಿಕ್ಕಿಗೆ ಬರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ 13 ಗುಂಟೆ ಜಾಗೆಯ ಚರ್ತುಗಡಿಯು ಏನಿದೆ ಎಂಬುದು ನನಗೆ ಸರಿಯಾಗಿ ಹೇಳಲು ಆಗುವುದಿಲ್ಲ. ಸದ್ರಿ 1 ಗುಂಟೆ ಜಾಗವು ಕರ್ನಾಟಕ ಸರ್ಕಾರದ ಹೆಸರಿನಲ್ಲಿರುವುದರಿಂದ ನಾವು ಪ್ರತಿವಾದಿಯನ್ನಾಗಿ ಸೇರಿಸಲ್ಲ ಎಂದರೆ ಸರಿಯಲ್ಲ.

ದಾವಾ ಸ್ಥಳಗಳು ಯಲ್ಲಾಪುರ ತಾಲೂಕಿನ ಮಂಚಿಕೇರಿ ಗ್ರಾಮದ ಹೆಗ್ಗುಂಬಳಿ ಗ್ರಾಮದ ಸರ್ವೇ ನಂಬರ್ 8/3 ರಲ್ಲಿ 33 ಗುಂಟೆ , ಮತ್ತು ಸರ್ವೇ ನಂಬರ್ 9/4 ರಲ್ಲಿ 15 ಗುಂಟೆ ನಮ್ಮ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿ . ಅದು ಖುಲ್ಲಾ ಜಾಗೆ ಆಗಿದೆ. ಸದ್ರಿ ಸ್ವತ್ತುಗಳು ನಮ್ಮ ತಾಯಿಯ ಹೆಸರಿಗೆ ಖರೀದಿ ಮಾಡಿದ ಆಸ್ತಿಗಳಾಗಿದೆ. ಸದ್ರಿ ಸ್ವತ್ತುಗಳನ್ನು ಖರೀದಿ ಮಾಡುವ ಕಾಲಕ್ಕೆ ನಮ್ಮ ಹಡಿನಬಾಳ ಗ್ರಾಮದ ಎಲ್ಲ ಸ್ವತ್ತುಗಳು ಸಾಮೂಹಿಕ ಕಬ್ಜೆಯಲ್ಲಿ ಇದ್ದವು ಎಂದರೆ ಸರಿ. ಸದ್ರಿ 2 ಆಸ್ತಿಗಳನ್ನು ಎಷ್ಟು ಮೊತ್ತಕ್ಕೆ ಖರೀದಿ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಸದ್ರಿ ಸ್ವತ್ತುಗಳನ್ನು ಖರೀದಿಸಲು ನಮ್ಮ ತಾಯಿಗೆ ಅವರ ನಾಲ್ಕು ಜನ ಅಣ್ಣಂದಿರು ಹಣದ ಸಹಾಯವನ್ನು ಮಾಡಿದ್ದಾರೆ. ಅವರು ಸದ್ರಿ ಹಣವನ್ನು ನಗದು ರೂಪದಲ್ಲಿ ನೀಡಿದ್ದು ಅದಕ್ಕೆ ಯಾವುದೇ ದಾಖಲೆ ಇಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಾಯಿಯು ಸದ್ರಿ ಸ್ವತ್ತುಗಳನ್ನು ಖರೀದಿ ಮಾಡುವ ಕಾಲಕ್ಕೆ ಬ್ಯಾಂಕನಿಂದ ಅಂದಾಜು 1,80,000/- ರೂ ಸಾಲವನ್ನು ಮಾಡಿದ್ದು ಅದರ ದಾಖಲೆಯನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇಲ್ಲ .ಕ್ರಯಪತ್ರದಲ್ಲಿ ಅವರು ಬ್ಯಾಂಕಿನಲ್ಲಿ
ಸಾಲ ಪಡೆದಿದ್ದರ ಬಗ್ಗೆ ನಮೂದಿಸಿದ್ದಾರೆ. ಯಲ್ಲಾಪುರ ತಾಲೂಕಿನ ಮಂಚಿಕೇರಿ ಗ್ರಾಮದ ಹೆಗ್ಗುಂಬಳಿಯಲ್ಲಿರುವ ಆಸ್ತಿಗಳು ಸಹ ಅವಿಭಕ್ತ ಕುಟುಂಬದ ಉತ್ಪನ್ನದಿಂದ ಖರೀದಿಸಿದ್ದು ಸದ್ರಿ ಆಸ್ತಿಗಳು ಸಹ ಅವಿಭಕ್ತ ಕುಟುಂಬದ ಆಸ್ತಿಗಳು ಆಗುತ್ತವೆ ಎಂದರೆ ಸರಿಯಲ್ಲ. ಸದ್ರಿ ಸ್ವತ್ತುಗಳು ಈಗಲೂ ಸಹ ನಮ್ಮ ಕುಟುಂದವರ ಸಾಮೂಹಿಕ ಕಬ್ಜೆಯಲ್ಲಿದೆ ಮತ್ತು ಅವುಗಳನ್ನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದ್ರಿ ಸ್ವತ್ತುಗಳಲ್ಲಿಯು ಸಹ ಪ್ರತಿವಾದಿಯರಿಗೆ ಹಕ್ಕಿದೆ ಎಂದರೆ ಸರಿಯಲ್ಲ.

ವೆಂಕಟ್ರಮಣ ಅವರು ಬ್ರಹ್ಮಚಾರಿ ಎಂದರೆ ಹೌದು . ಅವರು ಹಡಿನಬಾಳ ಗ್ರಾಮದ ಮನೆಯಲ್ಲಿ ಇದ್ದುಕೊಂಡು ಜಮೀನಿನ ಸಾಗುವಳಿಯನ್ನು ಮಾಡಿಕೊಂಡು ಬಂದಿದ್ದರು ಎಂದರೆ ಸರಿ. ಅವರು ಜಮೀನಿನಿಂದ ಬಂದ ಉತ್ಪನ್ನವನ್ನು ಅದೇ ಜಮೀನಿಗೆ ರೂಪಿತಗೊಳಿಸಲು ಹಾಕಿದ್ದಾರೆ ಎಂದರೆ ಸರಿಯಲ್ಲ . ನಾನು ಮತ್ತು ನಮ್ಮ ತಂದೆಯವರು ಸದ್ರಿ ಜಮೀನನ್ನು ರೂಪಿತಗೊಳಿಸಲು ಹಣದ ಸಹಾಯವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಸದ್ರಿ ಜಮೀನಿನಿಂದ ಉತ್ಪನ್ನವನ್ನು ಮಾತ್ರ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಆ ರೀತಿ ಪಡೆದ ಉತ್ಪನ್ನದಿಂದ ಯಲ್ಲಾಪುರ ತಾಲೂಕಿನ ಮಂಚಿಕೇರಿ ಗ್ರಾಮದಲ್ಲಿ ಆಸ್ತಿಗಳನ್ನು ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ನಾವು ಉದ್ದೇಶಪೂರ್ವಕವಾಗಿ ಯಲ್ಲಾಪುರ ತಾಲೂಕಿನ ಮಂಚಿಕೇರಿ ಗ್ರಾಮದಲ್ಲಿನ ಆಸ್ತಿಗಳನ್ನು ಸೇರಿಸದೇ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ. ಈ ದಾವಾ ಸ್ಥಳಗಳಿಗೆ ಯಾವುದೇ ನಿಶ್ಚಿತವಾದ ಚರ್ತುಗಡಿ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ಪ್ರ ದ ನ್ಯಾದಂ ಹೊನ್ನಾವರ.